2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ145/2019

| | | | |
|---|---|---|---|
| ಸಾಕ್ಷಿದಾರರ ಹೆಸರು | - | ರವಿ | ಪಿಡಬ್ಲೂ-12 |
| ತಂದೆಯ ಹೆಸರು | - | ಶಾಂತು | ಸಿಡಬ್ಲೂ -11 |
| ವಯಸ್ಸು | - | 45 ವರ್ಷ | |
| ಉದ್ಯೋಗ | - | ಕೂಲಿ ಕೆಲಸ | |
| ವಾಸ ಸ್ಥಳ | - | ಜೋಳದಾಳ್ ಪಾಳ್ಯ | |

ದಿನಾಂಕಃ 05.09.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಗೊತ್ತಿಲ್ಲ. ಆತನನ್ನು ನಾನು ಈ ಹಿಂದೆ ನೋಡಿರುವುದಿಲ್ಲ. ಫ್ರಾಸಾ.1 ಬೀಬೀ ಜಾನ್ ಗೊತ್ತಿಲ್ಲ. ಚಾಸಾ.7, ಚಾಸಾ.8 ಮತ್ತು ಚಾಸಾ.10 ರವರು ಗೊತ್ತಿಲ್ಲ. ಸಹ ಪಂಚನಾದ ಚಾಸಾ.3 ರವರು ಗೊತ್ತಿಲ್ಲ. ಮೃತ ಮಗು ಅಮಿಷಾ ಗೊತ್ತಿಲ್ಲ. ಚಾಸಾ.12 ರವರ ಹೆಸರನ್ನು ಕೇಳಿದ್ದೇನೆ, ಆದರೆ ನನಗೆ ಅವರ ಪರಿಚಯವಿಲ್ಲ.

2. ನಾನು ಕನ್ನಡ ಭಾಷೆಯಲ್ಲಿ ಸಹಿ ಮಾಡುತ್ತೇನೆ ಮತ್ತು ನನಗೆ ಕನ್ನಡ ಭಾಷೆಯಲ್ಲಿ ಬರೆಯಲು ಬರುತ್ತದೆ. ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈಗಾಗಲೇ ನಿಪಿ.1 ಎಂದು ಗುರುತಿಸಲಾಗಿರುವ ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಸದರಿ ನಿಪಿ.1 ರಲ್ಲಿರುವ

ಬರವಣಿಗೆ ನನ್ನದಲ್ಲ.

3. ಸಾಕ್ಷಿಯು ಈಗಾಗಲೇ ನಿಪಿ.9 ಮತ್ತು 10 ಎಂದು ಗುರುತಿಸಲಾಗಿರುವ ನೋಟೀಸು ಮತ್ತು ಅಮಾನತು ಪಂಚನಾಮೆಯಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಸಹಿಗಳನ್ನು ನಿಪಿ.9(ಬಿ) ಮತ್ತು ನಿಪಿ.10(ಬಿ) ಎಂದು ಗುರುತಿಸಲಾಯಿತು.

4. ಈಗ್ಗೆ 4 ವರ್ಷಗಳ ಹಿಂದೆ ಜೋಳದಾಳು ಪಾಳ್ಯದಲ್ಲಿ ಕೆಲಸಕ್ಕೆ ಹೋಗುತ್ತಿದ್ದ ಸಮಯದಲ್ಲಿ ಮಲ್ಲಂದೂರು ಪೊಲೀಸರು ಸದರಿ ಸಹಿಗಳನ್ನು ಸಾಕ್ಷಿಗೆ ಎಂದು ಹೇಳಿ ಪಡೆದುಕೊಂಡಿದ್ದಾರೆ. ಆದರೆ ಯಾವ ವಿಚಾರಕ್ಕೆಂದು ನನಗೆ ಗೊತ್ತಿಲ್ಲ. ಸದರಿ ದಾಖಲೆಗೆ ನನ್ನನ್ನು ಹೊರತುಪಡಿಸಿ ಬೇರೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಜರುಗಿಸಿಲ್ಲ ಮತ್ತು ಏನನ್ನೂ ಅಮಾನತುಪಡಿಸಿಕೊಂಡಿಲ್ಲ.

5. ನಿಪಿ.10 ಪಂಚನಾಮೆಯ ಮೂಲಕ ವಶಪಡಿಸಿಕೊಳ್ಳಲಾಯಿತು ಎಂದು ಹೇಳಲಾದ ಮೊಬೈಲ್ ನ ಮೇಲೆ ಅಂಟಿಸಲಾಗಿರುವ ಚೀಟಿಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸದರಿ ಸಹಿಯನ್ನು ಎಲ್ಲಿ, ಯಾವ ವಿಚಾರಕ್ಕೆ ಮಾಡಿದ್ದೇನೆ ಎಂದು ನನಗೆ ಗೊತ್ತಿಲ್ಲ. ಸದರಿ ಸಹಿಯನ್ನು ಯಾರು ಪಡೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

6. ಸಾಕ್ಷಿಗೆ ಎರಡು ದಾಖಲೆಗಳನ್ನು ತೋರಿಸಲಾಗಿ ಅವುಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಗಳು ದಿನಾಂಕ 05.08.2019 ರಂದು ಪಂಚನಾಮೆಗೆ ಜರುಗಿಸಲು ಸಹಕರಿಸುವಂತೆ ಪೊಲೀಸರು ನೀಡಿದ್ದಾರೆ ಎಂದು ಹೇಳಲಾದ ನೋಟೀಸು ಮತ್ತು ಅದೇ ದಿನ ಪೊಲೀಸರು ಜರುಗಿಸಿದ್ದಾರೆ ಎಂದು ಹೇಳಲಾದ ಅಮಾನತು ಪಂಚನಾಮೆಯಾಗಿದ್ದು ಅವುಗಳನ್ನು ಕ್ರಮವಾಗಿ ನಿಪಿ22 ಮತ್ತು ನಿಪಿ.23 ಎಂದು ಗುರುತಿಸಲಾಯಿತು. ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ.22(ಎ) ಮತ್ತು ನಿಪಿ.23(ಎ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಸಹ ಮೇಲೆ ಹೇಳಿದ ದಿನ, ಸ್ಥಳ ಮತ್ತು ಸಮಯದಲ್ಲಿ ಪೊಲೀಸರು ಹೇಳಿದ ಮೇರೆಗೆ ಮಾಡಿದ್ದೇನೆ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಜರುಗಿಸಿಲ್ಲ ಮತ್ತು ಏನನ್ನೂ ಅಮಾನತುಪಡಿಸಿಕೊಂಡಿಲ್ಲ. ಅದರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ.

7. ನಿಪಿ.23 ಪಂಚನಾಮೆಯ ಮೂಲಕ ವಶಪಡಿಸಿಕೊಳ್ಳಲಾಯಿತು ಎಂದು ಹೇಳಲಾದ ಉಲ್ಲನ್ ರಗ್ಗಿನ ಮೇಲೆ ಅಂಟಿಸಲಾಗಿರುವ ಚೀಟಿಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸದರಿ ಸಹಿಯನ್ನು ಎಲ್ಲಿ, ಯಾವ ವಿಚಾರಕ್ಕೆ ಮಾಡಿದ್ದೇನೆ ಎಂದು ನನಗೆ ಗೊತ್ತಿಲ್ಲ ಮತ್ತು ನಾನು ಆ ವಸ್ತುವನ್ನು ನೋಡಿಲ್ಲ.

8. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ ಅದರಲ್ಲಿ ತನ್ನ

ಇರುವಿಕೆಯನ್ನು ನೋಡಿ ಗುರುತಿಸಿ ಅದನ್ನು ಪೊಲೀಸರು ಜೋಳದಾಳ್ ಪಾಳ್ಯದಲ್ಲಿರುವ ಬಸವೇಗೌಡ ಎಂಬುವವರಿಗೆ ಸೇರಿದ ಕೂಲಿ ಲೈನ್‌ನ ಮನೆಯೊಂದರಲ್ಲಿ ತೆಗೆದುಕೊಂಡಿರುತ್ತಾರೆ ಎನ್ನುತ್ತಾರೆ. ಸದರಿ ಫೋಟೋವನ್ನು ನಿಪಿ.24 ಎಂದು ಗುರುತಿಸಲಾಯಿತು. ಸದರಿ ಫೋಟೋವನ್ನು ಸಾಕ್ಷಿಗೆ ಎಂದು ಹೇಳಿ ತೆಗೆದುಕೊಂಡಿದ್ದಾರೆ, ಆದರೆ ಯಾವ ವಿಚಾರಕ್ಕೆ ಎಂದು ನನಗೆ ಗೊತ್ತಿಲ್ಲ. ಸದರಿ ಫೋಟೋದಲ್ಲಿ ನನ್ನನ್ನು ಹೊರತುಪಡಿಸಿ ಬೇರೆ ಯಾರೆಲ್ಲಾ ಇದ್ದಾರೆ ಎಂದು ನನಗೆ ಗೊತ್ತಿಲ್ಲ.

9. ಸಾಕ್ಷಿಗೆ ಎರಡು ದಾಖಲೆಗಳನ್ನು ತೋರಿಸಲಾಗಿ ಅವುಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಗಳು ದಿನಾಂಕ 05.08.2019 ರಂದು ಪಂಚನಾಮೆಗೆ ಜರುಗಿಸಲು ಸಹಕರಿಸುವಂತೆ ಪೊಲೀಸರು ನೀಡಿದ್ದಾರೆ ಎಂದು ಹೇಳಲಾದ ನೋಟೀಸು ಮತ್ತು ಅದೇ ದಿನ ಪೊಲೀಸರು ಜರುಗಿಸಿದ್ದಾರೆ ಎಂದು ಹೇಳಲಾದ ಅಮಾನತು ಪಂಚನಾಮೆಯಾಗಿದ್ದು ಅವುಗಳನ್ನು ಕ್ರಮವಾಗಿ ನಿಪಿ25 ಮತ್ತು ನಿಪಿ.26 ಎಂದು ಗುರುತಿಸಲಾಯಿತು. ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ.25(ಎ) ಮತ್ತು ನಿಪಿ.26(ಎ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಸಹ ಮೇಲೆ ಹೇಳಿದ ದಿನ, ಸ್ಥಳ ಮತ್ತು ಸಮಯದಲ್ಲಿ ಪೊಲೀಸರು ಹೇಳಿದ ಮೇರೆಗೆ ಮಾಡಿದ್ದೇನೆ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು

ಜರುಗಿಸಿಲ್ಲ ಮತ್ತು ಏನನ್ನೂ ಅಮಾನತುಪಡಿಸಿಕೊಂಡಿಲ್ಲ. ಅದರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ.

10. ಸಾಕ್ಷಿಗೆ ಮತ್ತೆರಡು ದಾಖಲೆಗಳನ್ನು ತೋರಿಸಲಾಗಿ ಅವುಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಗಳು ದಿನಾಂಕ 05.08.2019 ರಂದು ಪೊಲೀಸರು ಆರೋಪಿಯಿಂದ ಅಮಾನತುಪಡಿಸಿಕೊಂಡಿದ್ದಾರೆ ಎಂದು ಹೇಳಲಾದ ಚಾಸಾ.7 ರೇಷ್ಮಾ ರವರ ಹೆಬ್ಬೆಟ್ಟಿನ ಗುರುತನ್ನು ಆರೋಪಿ ಹಾಕಿಸಿಕೊಂಡ ಎರಡು ಬಿಳಿಯ ಖಾಲಿ ಹಾಳೆಗಳಾಗಿದ್ದು ಅವುಗಳನ್ನು ಕ್ರಮವಾಗಿ ನಿಪಿ27 ಮತ್ತು ನಿಪಿ.28 ಎಂದು ಗುರುತಿಸಲಾಯಿತು. ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ.27(ಎ) ಮತ್ತು ನಿಪಿ.28(ಎ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಸಹ ಮೇಲೆ ಹೇಳಿದ ದಿನ, ಸ್ಥಳ ಮತ್ತು ಸಮಯದಲ್ಲಿ ಪೊಲೀಸರು ಹೇಳಿದ ಮೇರೆಗೆ ಮಾಡಿದ್ದೇನೆ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಜರುಗಿಸಿಲ್ಲ ಮತ್ತು ಏನನ್ನೂ ಅಮಾನತುಪಡಿಸಿಕೊಂಡಿಲ್ಲ. ಅದರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ.

11. ಸಾಕ್ಷಿಗೆ ಎರಡು ಫೋಟೋಗಳನ್ನು ತೋರಿಸಲಾಗಿ ಅವುಗಳಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿ ಅವುಗಳನ್ನು ಕಡೂರಿನ ಪೊಲೀಸ್ ತರಬೇತಿ ಶಾಲೆಯಲ್ಲಿ ಪೊಲೀಸರು ತೆಗೆದುಕೊಂಡಿರುವುದಾಗಿ ನುಡಿದಿರುತ್ತಾರೆ. ಸದರಿ

ಫೋಟೋಗಳನ್ನು ಕ್ರಮವಾಗಿ ನಿಪಿ29 ಮತ್ತು ನಿಪಿ.30 ಎಂದು ಗುರುತಿಸಲಾಯಿತು. ಸದರಿ ಸ್ಥಳಕ್ಕೆ ಪೊಲೀಸರು ಮತ್ತು ಸದರಿ ಫೋಟೋದಲ್ಲಿ ನನ್ನೊಂದಿಗೆ ಇರುವ ವ್ಯಕ್ತಿ ಕರೆದುಕೊಂಡು ಹೋಗಿದ್ದರು. ಬಸವೇಗೌಡರವರ ಎಸ್ಟೇಟಿನಲ್ಲಿ ಒಂದು ಮಗುವಿನ ಕೊಲೆಯಾಗಿರುವ ಬಗ್ಗೆ ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗಿದ್ದರು. ಸದರಿ ಫೋಟೋದಲ್ಲಿ ನನ್ನನ್ನು ಹೊರತುಪಡಿಸಿ ಬೇರೆ ಯಾರೆಲ್ಲಾ ಇದ್ದಾರೆ ಎಂದು ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ನನ್ನ ಸಮಕ್ಷಮ ಯಾವುದೇ ವ್ಯಕ್ತಿ ಪೊಲೀಸರಿಗೆ ಏನನ್ನೂ ಹಾಜರುಪಡಿಸಿಲ್ಲ ಮತ್ತು ಅವುಗಳನ್ನು ಪೊಲೀಸರು ವಶಪಡಿಸಿಕೊಂಡಿಲ್ಲ.

12. ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯು ದಿನಾಂಕ 04.08.2019 ರಂದು ಪೊಲೀಸರು ಆರೋಪಿಯಿಂದ ಪಡೆದುಕೊಂಡಿದ್ದಾರೆ ಎಂದು ಹೇಳಲಾದ ಸ್ವಇಚ್ಛಾ ಹೇಳಿಕೆಯಾಗಿದ್ದು, ಅದನ್ನು ನಿಪಿ.31 ಎಂದು ಗುರುತಿಸಲಾಯಿತು. ಅದರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ.31(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಸಹ ಮೇಲೆ ಹೇಳಿದ ದಿನ, ಸ್ಥಳ ಮತ್ತು ಸಮಯದಲ್ಲಿ ಪೊಲೀಸರು ಹೇಳಿದ ಮೇರೆಗೆ ಮಾಡಿದ್ದೇನೆ. ಅದರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ.

13. ನಾನು ಸಹಿ ಮಾಡಿರುವ ದಾಖಲೆಗಳಲ್ಲಿ ಬರೆದಿರುವ

ವಿಚಾರಗಳು ನನಗೆ ಗೊತ್ತಿಲ್ಲ. ಪೊಲೀಸರು ನನಗೆ ಅದನ್ನು ಓದಿ ಹೇಳಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಬೇರೆ ಯಾವುದೇ ಮಾಹಿತಿ ಇಲ್ಲ. ಪೊಲೀಸರು ನನ್ನನ್ನು ವಿಚಾರಿಸಿಲ್ಲ ಮತ್ತು ನಾನು ಅವರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-

14. ನಾನು ಚಾಸಾ.12 ರವರ ತೋಟದಲ್ಲಿ ಮೇಸ್ತ್ರಿ ಕೆಲಸ ಮಾಡಿಕೊಂಡಿದ್ದಿರಿ ಎಂದರೆ ಸರಿ. ಚಾಸಾ.12 ರವರ ಕೂಲಿ ಲೈನಿನ ಮನೆಯಲ್ಲಿ ವಾಸವಾಗಿದ್ದೆನು ಎಂದರೆ ಸರಿ. ನಾನು ಅಲ್ಲಿಗೆ ಹೋದ ಮೇಲೆ 2 ವರ್ಷದ ಹಿಂದೆ ನಮ್ಮ ಪಕ್ಕದ ಮನೆಗೆ ಚಾಸಾ.7 ರವರು ತನ್ನ ಮೂರು ಹೆಣ್ಣು ಮಕ್ಕಳೊಂದಿಗೆ ಬಂದು ಕೂಲಿ ಕೆಲಸ ಮಾಡಿಕೊಂಡು ವಾಸವಾಗಿದ್ದರು ಎಂದರೆ ಸರಿ. ಚಾಸಾ.7 ರವರೊಂದಿಗೆ ಆಕೆಯ ತಂದೆ ತಾಯಿ ವಾಸವಾಗಿದ್ದರು ಎಂದರೆ ಸಾಕ್ಷಿ ಅವರ ತಾಯಿ ಇರಬಹುದು, ಆದರೆ ತಂದೆಯ ಬಗ್ಗೆ ಗೊತ್ತಿಲ್ಲ. ಮತ್ತೊಂದು ಮನೆಯಲ್ಲಿ ಚಾಸಾ.7 ರವರ ತಂಗಿ ಮತ್ತು ಆಕೆಯ ಗಂಡ ಸಹ ಕೂಲಿ ಕೆಲಸ ಮಾಡಿಕೊಂಡು ವಾಸವಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಚಾಸಾ.7 ರವರ ಗಂಡ ಆಗ್ಗೆ 5 ವರ್ಷಗಳ ಹಿಂದೆ ಮೃತಪಟ್ಟಿದ್ದ ವಿಚಾರ ನಿಮಗೆ ತಿಳಿದಿತ್ತು ಎಂದರೆ ಸರಿಯಲ್ಲ.

15. ದಿನಾಂಕ 03.08.2019 ರಂದು ರಾತ್ರಿ 12.00 ಗಂಟೆ

ಸಮಯದಲ್ಲಿ ನಮ್ಮ ಲೈನ್ ಮನೆಯ ಮುಂದಿನ ರಸ್ತೆಯಲ್ಲಿ ಆಟೋ ರಿಕ್ಷಾವೊಂದು ಬಂದು ನಿಂತಿತ್ತು ಎಂದರೆ ಸರಿಯಲ್ಲ. ಆ ಶಬ್ದವನ್ನು ಕೇಳಿ ನಾನು ಎಚ್ಚರಗೊಂಡೆನು ಎಂದರೆ ಸರಿಯಲ್ಲ. ನಾನು ರೀಸಸ್ ಮಾಡಲು ಹೊರಗೆ ಹೋದಾಗ ಒಬ್ಬ ವ್ಯಕ್ತಿ ಸದರಿ ಆಟೋದಿಂದ ಇಳಿದು ಚಾಸಾ.7 ರವರ ಮನೆಗೆ ಹೋದನು ಎಂದರೆ ಸರಿಯಲ್ಲ. ನಾನು ಆ ವ್ಯಕ್ತಿ ಯಾರಾಗಿರಬಹುದೆಂದು ನೋಡಲು ಚಾಸಾ.7 ರವರ ಮನೆಯ ಬಳಿ ಹೋದಾಗ ಬಾಗಿಲು ಇನ್ನೂ ಹಾಕಿರಲಿಲ್ಲ, ಚಾಸಾ.7 ಮತ್ತು ಒಬ್ಬ ಹುಡುಗ ಅಲ್ಲಿ ಇದ್ದರು ಮತ್ತು ಮಗು ಅಮಿಷಾ ಮಲಗಿತ್ತು ಎಂದರೆ ಸರಿಯಲ್ಲ.

16. ದಿನಾಂಕ 04.08.2019 ರಂದು ಬೆಳಿಗ್ಗೆ ಸುಮಾರು 6.00 ಗಂಟೆ ಸಮಯದಲ್ಲಿ ಚಾಸಾ.7 ರವರು ಅವರ ತಾಯಿಯ ಮನೆಯ ಬಳಿ ಚಿಕ್ಕ ಮಗುವನ್ನು ಇಟ್ಟುಕೊಂಡು ಅಳುತ್ತಿದ್ದರು ಎಂದರೆ ಸರಿಯಲ್ಲ. ಆಗ ಅವರೊಂದಿಗೆ ಅವರ ಸಂಬಂಧಿಕರು ಇದ್ದು ಅವರು ಕೂಗಾಡುತ್ತಿದ್ದರು ಎಂದರೆ ಸರಿಯಲ್ಲ. ಆಗ ನಾನು ಅಲ್ಲಿಗೆ ಹೋಗಿ ನೋಡಲಾಗಿ ಮಗು ಅಮಿಷಾ ಮೃತಪಟ್ಟಿತ್ತು ಎಂದರೆ ಸರಿಯಲ್ಲ. ನಂತರ ನಾನು ಆ ಬಗ್ಗೆ ವಿಚಾರ ಮಾಡಲಾಗಿ ಚಾಸಾ.7 ರವರು ರಾತ್ರಿ 12.00 ಗಂಟೆ ಸಮಯದಲ್ಲಿ ನ್ಯಾಯಾಲಯದಲ್ಲಿ ಹಾಜರಿರುವ ಲಿಂಗರಾಜನೆಂಬ ವ್ಯಕ್ತಿ ಯಾವುದೋ ಆಟೋದಲ್ಲಿ ಆಕೆಯ ಮನೆಗೆ ಹೋಗಿ ಆಕೆಯೊಂದಿಗೆ ಮಾತನಾಡಿ ಆಕೆಗೆ ಏನನ್ನೋ

ಕುಡಿಸಿದಾಗ ಆಕೆಗೆ ಜ್ಞಾನ ಇಲ್ಲದಂತಾಗಿದ್ದಾಗಿ, 2 ಖಾಲಿ ಹಾಳೆಗಳಿಗೆ ಆಕೆಯ ಹೆಬ್ಬೆಟ್ಟಿನ ಗುರುತನ್ನು ಪಡೆದುಕೊಂಡಿದ್ದಾಗಿ ನಂತರ ಸುಮಾರು 2.00 ಗಂಟೆಗೆ ಮನೆಯಿಂದ ಆತ ಹೋಗಿದ್ದಾಗಿ ಸದರಿ ವ್ಯಕ್ತಿಯೇ ಯಾವುದೋ ರೀತಿಯಲ್ಲಿ ಮಗುವನ್ನು ಸಾಯಿಸಿ ಹೋಗಿದ್ದಾಗಿ ತಿಳಿಸಿದರು ಎಂದರೆ ಸರಿಯಲ್ಲ.

17. ಚಾಸಾ.7 ರವರ ಗಂಡ ತೀರಿಕೊಂಡ ಬಳಿಕ ಆಗ್ಗೆ 3 ವರ್ಷಗಳ ಹಿಂದೆ ಚಾಸಾ.7 ರವರು ಆರೋಪಿಯೊಂದಿಗೆ ದೈಹಿಕ ಸಂಬಂಧವನ್ನು ಹೊಂದಿದ್ದ ಪರಿಣಾಮ ಆಕೆಗೆ ಅಮಿಷಾ ಎಂಬ ಹೆಣ್ಣು ಮಗು ಹುಟ್ಟಿದ್ದಾಗಿ ಆರೋಪಿ ಪೊಲೀಸ್ ಕೆಲಸಕ್ಕೆ ಸೇರಲು ಕಡೂರಿನಲ್ಲಿ ಟ್ರೇನಿಂಗ್ ಮಾಡುತ್ತಿದ್ದು ಆತ ಆಗಾಗ್ಗೆ ಚಾಸಾ.7 ರವರ ಬಳಿ ಬಂದು ಹೋಗುತ್ತಿದ್ದ ವಿಚಾರ ತಿಳಿಯಿತು ಎಂದರೆ ಸರಿಯಲ್ಲ. ಆ ದಿನ ರಾತ್ರಿ ನಾನು ನೋಡಿದ ವ್ಯಕ್ತಿಯೇ ಆ ರೀತಿ ಮಾಡಿದ್ದಾನೆಂದು ತಿಳಿದಿದ್ದಾಗಿ ನಾನು ನಮ್ಮ ತೋಟದ ಮಾಲೀಕರಾದ ಚಾಸಾ.12 ರವರಿಗೆ ತಿಳಿಸಿದ್ದೇನೆ ಎಂದರೆ ಸರಿಯಲ್ಲ. ಆಗ ಅವರು ಮಲ್ಲಂದೂರು ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡುವಂತೆ ತಿಳಿಸಿದ್ದರು ಎಂದರೆ ಸರಿಯಲ್ಲ. ಅದರಂತೆ ನಾನು ಮೃತ ಮಗು ಅಮಿಷಾಳ ಅಜ್ಜಿಯಾದ ಚಾಸಾ.1 ಬೀಬಿಜಾನ್ ಮತ್ತು ಚಾಸಾ.7 ರವರ ತಂಗಿಯ ಗಂಡನಾದ ಚಾಸಾ.3 ನಾಗರಾಜ್ ರವರೊಂದಿಗೆ ಮಲ್ಲಂದೂರು ಪೊಲೀಸ್ ಠಾಣೆಗೆ ದಿನಾಂಕ 04.08.2019 ರಂದು ಬೆಳಿಗ್ಗೆ

ಹೋದೆನು ಎಂದರೆ ಸರಿಯಲ್ಲ. ಅಲ್ಲಿ ಚಾಸಾ.1 ರವರು ಹೇಳಿದಂತೆ ನಾನು ನಿಪಿ.1 ರಂತೆ ದೂರನ್ನು ನನ್ನ ಬರವಣಿಗೆಯಲ್ಲಿ ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ದೂರನ್ನು ನನ್ನ ಬರವಣಿಗೆಯಲ್ಲಿ ಬರೆದುಕೊಟ್ಟು ನಂತರ ಅದರಲ್ಲಿ ನನ್ನ ಸಹಿಯನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ. ನಿಪಿ.1 ರಂತೆ ದೂರನ್ನು ಬರೆದುಕೊಟ್ಟಿದ್ದರೂ ಸಹ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸದರಿ ದೂರಿನ ಮೇರೆಗೆ ಆರೋಪಿಯ ವಿರುದ್ಧ ಪ್ರಕರಣ ದಾಖಲಾಯಿತು ಎಂದರೆ ಸರಿಯಲ್ಲ.

18. ದಿನಾಂಕ 04.08.2019 ರಂದು ಆರೋಪಿ ಲಿಂಗರಾಜನನ್ನು ಪೊಲೀಸರು ಬಂಧಿಸಿ ಕರೆತಂದಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಆರೋಪಿಯ ಹೇಳಿಕೆಯನ್ನು ಪಡೆಯುವಾಗ ಪಂಚರಾಗಿ ಸಹಕರಿಸುವಂತೆ ಪೊಲೀಸರು ನನ್ನನ್ನು ಕರೆದಿದ್ದರು ಎಂದರೆ ಸರಿಯಲ್ಲ. ಅದರಂತೆ ನಾನು ಅದೇ ದಿನ ರಾತ್ರಿ ಗ್ರಾಮಾಂತರ ವೃತ್ತ ನಿರೀಕ್ಷಕರ ಕಚೇರಿಗೆ ಹೋಗಿದ್ದೆನು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನೊಂದಿಗೆ ಚಾಸಾ.3 ರವರು ಹಾಜರಿದ್ದರು ಎಂದರೆ ಸರಿಯಲ್ಲ. ಅಲ್ಲಿ ರಾತ್ರಿ 10.30 ಗಂಟೆಯಿಂದ 11.30 ಗಂಟೆಯವರೆಗೆ ನನ್ನ ಮತ್ತು ಚಾಸಾ.3 ರವರ ಸಮಕ್ಷಮ ತನಿಖಾಧಿಕಾರಿಗಳು ಆರೋಪಿಯ ಸ್ವಇಚ್ಛಾ ಹೇಳಿಕೆಯನ್ನು ನಿಪಿ.31 ರಂತೆ ಪಡೆದುಕೊಂಡರು ಎಂದರೆ ಸರಿಯಲ್ಲ. ಸದರಿ ಹೇಳಿಕೆಯಲ್ಲಿ ಆರೋಪಿ ಆತನೊಂದಿಗೆ

ಹೋದರೆ ಆತ ಮಗು ಅಮಿಷಾಳ ಬಾಯಿಗೆ ತನ್ನ ಕೈಯ್ಯನ್ನು ಒತ್ತಿ ಉಸಿರುಗಟ್ಟಿಸಿ ಕೊಲೆ ಮಾಡಿದ ಸ್ಥಳ, ರೇಷ್ಮಾಳಿಂದ ಖಾಲಿ ಹಾಳೆಗೆ ಸಹಿ ಹಾಕಿಸಿಕೊಂಡ ಹಾಳೆಗಳನ್ನು ತೋರಿಸುವುದಾಗಿ ಹೇಳಿದ್ದಾನೆ ಎಂದರೆ ಸರಿಯಲ್ಲ. ದಿನಾಂಕ 05.08.2019 ರಂದು ಆರೋಪಿಯು ತಾನು ಅನೈತಿಕ ಸಂಬಂಧ ಹೊಂದಿದ್ದ ಚಾಸಾ.7 ರವರೊಂದಿಗೆ ಸಂಪರ್ಕದಲ್ಲಿದ್ದ Oppo ಕಂಪೆನಿಯ ಬಳಿ ಬಣ್ಣದ ಮೊಬೈಲನ್ನು ಚಿಕ್ಕಮಗಳೂರು ಗ್ರಾಮಾಂತರ ಪೊಲೀಸ್ ಠಾಣೆಯ ಆವರಣದಲ್ಲಿ ತನಿಖಾಧಿಕಾರಿಗಳಿಗೆ ಹಾಜರುಪಡಿಸಿದ್ದು ಅದನ್ನು ಅವರು ಬೆಳಿಗ್ಗೆ 9.00 ಗಂಟೆಯಿಂದ 9.45 ಗಂಟೆಯವರೆಗೆ ನಿಪಿ.10 ರಂತೆ ನನ್ನ ಮತ್ತು ಸಹ ಪಂಚರಾದ ಚಾಸಾ.3 ರವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿ ಅಮಾನತುಪಡಿಸಿಕೊಂಡರು ಎಂದರೆ ಸರಿಯಲ್ಲ. ಸದರಿ ಪಂಚನಾಮೆಗೆ ಸಹಕರಿಸುವಂತೆ ನಿಪಿ.9 ರಂತೆ ಪೊಲೀಸರು ನೋಟೀಸನ್ನು ಜಾರಿ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಮೊಬೈಲನ್ನು ಆರೋಪಿಯಿಂದ ಅಮಾನತುಪಡಿಸಿಕೊಂಡ ಬಳಿಕ ಅದರ ಮೇಲೆ ನನ್ನ ಸಹಿ ಇರುವ ಚೀಟಿಯನ್ನು ಪೊಲೀಸರು ಅಂಟಿಸಿದರು ಎಂದರೆ ಸರಿಯಲ್ಲ. ಸದರಿ ಪಂಚನಾಮೆಯಲ್ಲಿ ಬರೆದಿರುವ ವಿಚಾರಗಳನ್ನು ತಿಳಿಸಿದುಕೊಂಡು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

19. ಅದೇ ದಿನ ಅಂದರೆ ದಿನಾಂಕ 05.08.2019 ರಂದು ಆರೋಪಿ ನನ್ನನ್ನು ಮತ್ತು ಸಹ ಪಂಚರಾದ ಚಾಸಾ.3 ರವರನ್ನು

ಮತ್ತು ಪೊಲೀಸರನ್ನು ಚಾಸಾ.7 ರವರು ವಾಸವಾಗಿದ್ದ ಚಾಸಾ.12 ರವರಿಗೆ ಸೇರಿದ ಜೋಳದಾಳ್ ಪಾಳ್ಯ ಗ್ರಾಮದಲ್ಲಿರುವ ಕೂಲಿ ಲೈನ್ ನ ಮನೆಗೆ ಕರೆದುಕೊಂಡು ಹೋಗಿ ದಿನಾಂಕ 03.08.2019 ರಂದು ಸದರಿ ಮನೆಯ ಹಾಲಿನಲ್ಲಿ ಮಲಗಿದ್ದ ಮಗು ಅಮಿಷಾಳ ಮೂಗು ಮತ್ತು ಬಾಯಿಯನ್ನು ತನ್ನ ಕೈಯಿಂದ ಒತ್ತಿ, ಉಸಿರುಗಟ್ಟಿಸಿ ಕೊಲೆ ಮಾಡಿದ ಸ್ಥಳ ಅದೇ ಎಂದು ತಿಳಿಸಿ ಕೊಲೆ ಮಾಡಿದ ನಂತರ ಯಾರಿಗೂ ತಿಳಿಯದ ಹಾಗೇ ಒಂದು ಸಣ್ಣ ಉಲ್ಲನ್ ರಗ್ಗನ್ನು ಹೊದಿಸಿದ್ದಾಗಿ ತಿಳಿಸಿ ಸದರಿ ಸ್ಥಳದಲ್ಲಿದ್ದ ಒಂದು ಉಲ್ಲನ್ ರಗ್ಗನ್ನು ಹಾಜರುಪಡಿಸಿದ್ದಾನೆ ಎಂದರೆ ಸರಿಯಲ್ಲ. ನಂತರ ಪೊಲೀಸರು ಸದರಿ ಸ್ಥಳದಲ್ಲಿ ನನ್ನ ಹಾಗೂ ಚಾಸಾ.3 ರವರ ಸಮಕ್ಷಮ ನಿಪಿ.23 ರಂತೆ ಬೆಳಿಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 12.00 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿ ಸದರಿ ಉಲ್ಲನ್ ರಗ್ಗನನ್ನು ಅಮಾನತುಪಡಿಸಿಕೊಂಡರು ಎಂದರೆ ಸರಿಯಲ್ಲ. ಸದರಿ ಪಂಚನಾಮೆಗೆ ಸಹಕರಿಸುವಂತೆ ಪೊಲೀಸರು ನಿಪಿ.22 ರಂತೆ ನೋಟೀಸನ್ನು ಜಾರಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ರಗ್ಗನ್ನು ವಶಪಡಿಸಿಕೊಂಡ ಸಮಯದಲ್ಲಿ ನಿಪಿ.24 ರಂತೆ ಫೋಟೋವನ್ನು ತೆಗೆಯಲಾಯಿತು ಎಂದರೆ ಸರಿಯಲ್ಲ. ನಿಪಿ.23 ರಲ್ಲಿ ಬರೆದಿರುವ ವಿಚಾರಗಳನ್ನು ತಿಳಿದುಕೊಂಡು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

20. ಅದೇ ದಿನ ಅಂದರೆ ದಿನಾಂಕ 05.08.2019 ರಂದು

ಆರೋಪಿ ನನ್ನನ್ನು ಮತ್ತು ಸಹ ಪಂಚರಾದ ಚಾಸಾ.3 ರವರನ್ನು ಮತ್ತು ಪೊಲೀಸರನ್ನು ಕಡೂರು ತಾಲೂಕು, ಕುರುಬರಹಳ್ಳಿಯಲ್ಲಿರುವ ಪೊಲೀಸ್ ತರಬೇತಿ ಕೇಂದ್ರಕ್ಕೆ ಕರೆದುಕೊಂಡು ಹೋಗಿ ಸದರಿ ಕೇಂದ್ರದ 1 ನೇ ಮಹಡಿಯಲ್ಲಿ ರೂಮ್ ನಂಬರ್ 7 ಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಆತ ಮಲಗುತ್ತಿದ್ದ ಮಂಚದ ಮೇಲೆ ಇದ್ದ ಬ್ಯಾಗಿನಿಂದ ಎರಡು ಬಿಳಿಯ ಖಾಲಿ ಹಾಳೆಗಳನ್ನು ತೆಗೆದು ಸದರಿ ಹಾಳೆಗಳು ತಾನು ಚಾಸಾ.7 ರೇಷ್ಮಾಳ ಹೆಬ್ಬೆಟ್ಟಿನ ಗುರುತನ್ನು ಹಾಕಿಸಿಕೊಂಡ ಹಾಳೆಗಳು ಎಂದು ಈಗಾಗಲೇ ನಿಪಿ.27 ಮತ್ತು ನಿಪಿ.28 ಎಂದು ಗುರುತಿಸಲ್ಪಟ್ಟಿರುವ ಹಾಳೆಗಳನ್ನು ಹಾಜರುಪಡಿಸಿದನು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಿಪಿ.29 ಮತ್ತು 30 ರಂತೆ ಫೋಟೋಗಳನ್ನು ತೆಗೆಯಲಾಯಿತು ಎಂದರೆ ಸರಿಯಲ್ಲ. ಸದರಿ ಹಾಳೆಗಳನ್ನು ಪೊಲೀಸರು ಕೆಂಪು ಶಾಹಿಯಲ್ಲಿ Q1 ಮತ್ತು Q2 ಎಂದು ಸಂಕೇತವನ್ನು ನೀಡಿ ಅವುಗಳನ್ನು ಒಂದು ಖಾಕಿ ಕವರ್ ನಲ್ಲಿ ಹಾಕಿ ಸೀಲು ಮಾಡಿ ನಿಪಿ.26 ರಂತೆ ಮಧ್ಯಾಹ್ನ 1.00 ಗಂಟೆಯಿಂದ ಮಧ್ಯಾಹ್ನ 2.00 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿ ಅಮಾನತುಪಡಿಸಿಕೊಂಡರು ಎಂದರೆ ಸರಿಯಲ್ಲ. ಸದರಿ ಪಂಚನಾಮೆಗೆ ಸಹಕರಿಸುವಂತೆ ಪೊಲೀಸರು ನಿಪಿ.25 ರಂತೆ ನೋಟೀಸನ್ನು ಜಾರಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಪಿ.26 ರಲ್ಲಿ ಬರೆದಿರುವ ವಿಚಾರಗಳನ್ನು ತಿಳಿದುಕೊಂಡು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

21. ಈ ಎಲ್ಲಾ ವಿಚಾರಗಳನ್ನು ತಿಳಿಸಿ ದಿನಾಂಕ 07.08.2019 ರಂದು ಪೊಲೀಸರಿಗೆ ಹೇಳಿಕಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ.32 ಎಂದು ಗುರುತಿಸಲಾಯಿತು.

22. ಘಟನೆಯ ಬಗ್ಗೆ ಮಾಹಿತಿ ಇದ್ದು ಆರೋಪಿ ನಿಮ್ಮ ಸಮಕ್ಷಮ ನಿಪಿ.31 ರಂತೆ ಸ್ವಇಚ್ಛಾ ಹೇಳಿಕೆಯನ್ನು ನೀಡಿದ್ದು ನೀವು ಘಟನೆಯ ಬಗ್ಗೆ ಪೊಲೀಸರಿಗೆ ನಿಪಿ.32 ರಂತೆ ಹೇಳಿಕೆಯನ್ನು ನೀಡಿದ್ದು ನಿಮ್ಮ ಸಮಕ್ಷಮ ಪೊಲೀಸರು ನಿಪಿ.10, ನಿಪಿ. 23 ಮತ್ತು 26 ರಂತೆ ಮಹಜರುಗಳನ್ನು ಜರುಗಿಸಿ ಮೇಲೆ ತಿಳಿಸಿದ ವಸ್ತುಗಳನ್ನು ಅಮಾನತುಪಡಿಸಿಕೊಂಡಿದ್ದರೂ ಸಹ ಈಗ ಆರೋಪಿಯೊಂದಿಗೆ ಶಾಮೀಲಾಗಿ ಅವನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಪಾಟೀ ಸವಾಲು: ಆರೋಪಿ ಪರ ವಕೀಲರು ಸಾಕ್ಷಿಯ ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.